ಓಎಸ್.61/2015
ಡಿಬ್ಲೂ.1

/1/

ದಿನಾಂಕ ಃ 29-01-2026 ರಂದು ಸಾಕ್ಷಿದಾರರಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ವಾದಿ ಪರ ಃ ಶ್ರೀ ಬಿ ಎಸ್ಎನ್., ವಕೀಲರಿಂದಃ

ಭೂಸುಧಾರಣೆಗೆ ಫಾರಂ ನಂಬರ್ 7 ರ ಅಡಿಯಲ್ಲಿ ಕೊಟ್ಟ ಅರ್ಜಿಯನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಸದರಿ ಅರ್ಜಿಯನ್ನು ಪರಿಶೀಲನೆ ಮಾಡಿದಲ್ಲಿ ಯಾರಿಗೆ ಭೂ ಮಂಜೂರಾತಿಯಾಗಿರುತ್ತದೆ ಹಾಗೂ ಕುಟುಂಬ ಸದಸ್ಯರ ವಿವರಗಳು ತಿಳಿದುಬರುತ್ತದೆ ಎಂದರೆ ಸರಿ.

ನನ್ನ ತಂದೆಯಾದ ದುಗ್ಗಪ್ಪನವರು ಗೇಣಿ ಮಾಡುತ್ತಿದ್ದು, ನನ್ನ ತಂದೆಯವರೊಂದಿಗೆ ನಾಗರತ್ನ ರವರು ಒಟ್ಟಿಗೆ ಗೇಣಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ನಾಗರತ್ನರವರು ಒಂದೇ ಮನೆಯಲ್ಲಿದ್ದರು ಎಂದರೆ ಸರಿ. ನಾಗರತ್ನ ಅವರಿಗೆ 1968 ರಲ್ಲಿ ಮದುವೆಯಾಗಿದ್ದು, ಮದುವೆಯಾದ 3 ತಿಂಗಳಲ್ಲಿ ಅವರ ಗಂಡ ಮೃತಪಟ್ಟಿರುತ್ತಾರೆ. ದುಗ್ಗಪ್ಪಗೌಡರು ನಾಗರತ್ನ ಅವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದು ನೋಡಿಕೊಳ್ಳುತ್ತಿದ್ದರು. ದುಗ್ಗಪ್ಪ ಗೌಡರು ಮಾಡುತ್ತಿದ್ದ ಗೇಣಿ ಆಸ್ತಿಯನ್ನೇ ನಾಗರತ್ನ ಅವರ ಹೆಸರಿನಲ್ಲಿ ಗೇಣಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಲಕ್ಷ್ಮಣ ಮತ್ತು ರತ್ನಾಕರ , ನಾನು ಹಾಗೂ ದುಗ್ಗಪ್ಪಗೌಡರು ಒಟ್ಟಾಗಿ ನಾಗರತ್ನಮ್ಮನವರ ಗೇಣಿ ಜಮೀನು ನಿರ್ವಹಣೆ ಮಾಡುತ್ತಿದ್ದೆವು. ಆ ಸಮಯದಲ್ಲಿ ನಮ್ಮ ಕುಟುಂಬದ ಆಸ್ತಿಗಳು ವಿಭಾಗವಾಗಿರಲಿಲ್ಲ ಎಂದರೆ ಸರಿ.

ಗೇಣಿ ಜಮೀನುಗಳನ್ನು ದುಗ್ಗಪ್ಪ ಗೌಡರ ಹೆಸರಿನಲ್ಲಿದ್ದ ಜಮೀನನ್ನು ನಾನು, ಲಕ್ಷ್ಮಣ, ರತ್ನಾಕರ, ರಾಮಣ್ಣ ಹಾಗು ದುಗ್ಗಪ್ಪ ಗೌಡರು ವಿಭಾಗ ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ಗಂಡು ಮಕ್ಕಳು ಮಾತ್ರ ವಿಬಾಗ ಮಾಡಿಕೊಂಡು ಹೆಣ್ಣು ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ.

ನಾಗರತ್ನರವರ ಹೆಸರಿಗೆ ಬಂದ ಜಮೀನುಗಳನ್ನು ನಮ್ಮ ಹೆಸರಿಗೆ ಬಂದ ಹಿಸ್ಸಾ ಪತ್ರದಲ್ಲಿ ಯಾವ ಕಾರಣದಿಂದ ನಮೂದು ಮಾಡಿರುವುದಿಲ್ಲ ಎಂದರೆ ಸೇರಿಸಿರುವುದಿಲ್ಲ

ಎನ್ನುತ್ತಾರೆ. ಸದರಿ ನಾಗರತ್ನಮ್ಮನವರ ಹೆಸರನ್ನು ಯಾವ ಕಾರಣದಿಂದ ಹಿಸ್ಸಾ ಪತ್ರದಲ್ಲಿ ಆ ರೀತಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾಗರತ್ನಮ್ಮನವರ ಹೆಸರಿನಲ್ಲಿದ್ದ ಆಸ್ತಿಗಳಿಗೆ ನನ್ನತಂದೆಯಾದ ದುಗ್ಗಪ್ಪ ಗೌಡರೆ ಅರ್ಜಿ ನೀಡಿರುತ್ತಾರೆ. ಭೂಸುಧಾರಣಾ ಮಂಡಳಿಯಲ್ಲಿ ತೀರ್ಮಾನವಾದಾಗ ನನ್ನ ತಂದೆಯವರೇ ಸಾಕ್ಷಿ ನುಡಿದಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾಗರತ್ನಮ್ಮನವರು ಭೂ ನ್ಯಾಯ ಮಂಡಳಿಗೆ ಹೋಗಿ ಸಾಕ್ಷ್ಯ ನುಡಿದಿರುವ ಬಗ್ಗೆ ನನಗೆ ಗೊತ್ತಿಲ್ಲ. ಭೂಸುದಾರಣ ಮಂಡಳಿಯಲ್ಲಿ ನಡೆದ ನಡಾವಳಿಗಳು , ಆದೇಶ ಹಾಗೂ ಇತರ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ಸರ್ವೆ ನಂಬರ್ 25 ರಲ್ಲಿ 17 ಗುಂಟೆ , 17 ರಲ್ಲಿ 1 ಎಕರೆ , 3 ಗುಂಟೆ ಸರ್ವೆ ನಂಬರ್ 199, ಹಳೆ ನಂಬರ್ 96 ರಲ್ಲಿ 1 ಎಕರೆ 20 ಗುಂಟೆ ಆಸ್ತಿಗಳೆಲ್ಲಾ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದರಿಂದ ವಿಬಾಗಕ್ಕೆ ಅರ್ಹವಾದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ.

ನಾಗರತ್ನನವರು 25, ಫೆಬ್ರುವರಿಯಂದು ಮೃತಪಟ್ಟಿರುತ್ತಾರೆ. ಸದರಿ ನಾಗರತ್ನರವರು ಪ್ರಸ್ತುತ ದಾವೆಯಲ್ಲಿ 4 ನೇ ಪ್ರತಿವಾದಿಯಾಗಿ ಮಾಡಿ ನ್ಯಾಯಾಲಯದಿಂದ ಸಮನ್ಸ್ ಜಾರಿಯಾಗಿತ್ತುಎಂದರೆ ಸರಿ. ಸದರಿ ನಾಗರತ್ನರವರು ವಕೀಲರನ್ನು ನೇಮಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 1964-65 ರಿಂದ 1974-75 ರ ಪಹಣಿಗಳನ್ನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1964-65 ರಿಂದ 1974-75 ರ ಪಹಣಿಗಳನ್ನು ಹಾಜರುಪಡಿಸಲು ನನಗೆ ಯಾವುದೆ ರೀತಿಯತೊಂದರೆ ಇರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಾಗರತ್ನಮ್ಮನವರು ಭೂಸುಧಾರಣೆ ಮಂಡಳಿಯಲ್ಲಿ ನೀಡಿದ ಹೇಳಿಕೆಗಳು ಹಾಗು ಭೂ ಸುದಾರಣಾ ಮಂಡಳಿಯ ಆದೇಶವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದೆರ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ. ನಾಗರತ್ನರವರ ಜಮೀನಿನ ಮಂಜೂರಾತಿಗೆ ಸಂಬಂದಿಸಿ ದುಗ್ಗಪ್ಪ ಗೌಡರೇ ಮೌಲ್ಯವನ್ನು ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೌಲ್ಯವನ್ನು ಯಾರು ಪಾವತಿಸಿದರು ಎಂದು ಪರಿಶೀಲನೆ ಮಾಡಲಾಗಿರುತ್ತದೆಯೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೌಲ್ಯವನ್ನು ದುಗ್ಗಪ್ಪ ಗೌಡರ

ಒಟ್ಟು ಕುಟುಂಬದ ಆಸ್ತಿಯಿಂದ ಪಾವತಿ ಮಾಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮೌಲ್ಯವನ್ನು ನಾಗರತ್ನರವರು ಪಾವತಿಸಿದ ಬಗ್ಗೆ ಯಾವುದೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಾಗರತ್ನರವರು ನಮ್ಮೆಲ್ಲರಿಗೂ ಸಹೋದರಿಯಾಗಿದ್ದು ನಮ್ಮೆಲ್ಲರ ಮೇಲೂ ಸಮಾನವಾದ ಪ್ರೀತಿ ವಾತ್ಸಲ್ಯ ಮತ್ತು ದೃಷ್ಟಿ ಕೋನ ಇತ್ತು ಎಂದರೆ 3 ಜನರಮೇಲೆಮಾತ್ರ ಇತ್ತು ಎನ್ನುತ್ತಾರೆ, ವಾದಿಯ ಮೇಲೆ ಯಾವ ಕಾರಣದಿಂದ ನಾಗರತ್ನರವರಿಗೆ ಪ್ರೀತಿ ವಿಶ್ವಾಸ ಇರಲಿಲ್ಲ ಎಂದರೆ ದುಡ್ಡಿನ ವ್ಯವಹಾರದಲ್ಲಿ ಮನಃಸ್ತಾಪ ಇತ್ತು ಎನ್ನುತ್ತಾರೆ. ನಾಗರತ್ನರವ ರಿಗೆ ಪ್ರಸ್ತುತ ದಾವೆಯಲ್ಲಿ ಹಾಜರಾಗಿ ನಡೆಸುವ ಚೈತ್ಯ ಇತ್ತೋ ಇಲ್ಲವೋ ಎಂದರೆನನಗೆ ಆ ಬಗ್ಗೆ ಗೊತ್ತಿಲ್ಲ, ನಾಗರತ್ನರವರಿಗೆ ನ್ಯಾಯಾಲಯದಿಂದ ನೋಟಿಸ್ ಜಾರಿಯಾದ ನಂತರ ಯಾವ ಕಾರಣದಿಂದ ನ್ಯಾಯಾಲಯಕ್ಕೆಹಾಜರಾಗಿರಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಾಗರತ್ನರವರಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನೂ ನನ್ನ ತಂದೆಯೇ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ನಾಗರತ್ನಮ್ಮನವರು ಅವಿದ್ಯಾವಂತರಾಗಿದ್ದರು ಎಂದರೆ ಓದಿದ್ದರು ಆದರೆ ಎಷ್ಟು ಓದಿದ್ದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ಮನವರು ಕೆನರಾ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು. ನಾಗರತ್ನಮ್ಮನವರು ಯಾವ ರೀತಿ ಸಹಿ ಮಾಡುತ್ತಿದ್ದರು ಎಂದರೆ ಒ. ಡಿ. ನಾಗರತ್ನ ಎಂದು ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆ ಅಹವಾಲು ತಃಖ್ತೆಯ ಆನ್ ಲೈನ್ ದಾಖಲೆಯಾಗಿದ್ದು ಅದನ್ನು ನೋಡಿ ಸಾಕ್ಷಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ.21 ಹಾಗು ದಾಖಲಾತಿಯಲ್ಲಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಮೆಮೊರಾಂಡಮ್ಮು ಆನ್ ಲೈನ್ ದಾಖಲೆಯಾಗಿದ್ದು ಸದರಿ ದಾಖಲೆಯಲ್ಲಿ ಒ.ಡಿ. ನಾಗರತ್ನ ಎಂಬ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.22 ಹಾಗೂ ಒ.ಡಿ. ನಾಗರತ್ನ ಎಂಬ ಸಹಿಯನ್ನು

ನಿಪಿ.22(ಎ) ಎಂದು ಗುರುತಿಸಲಾಯಿತು.

ನಿಪಿ.21 ಹಾಗೂ 22 ಗಳನ್ನು ಸಂಬಂಧ ಪಟ್ಟ ಇಲಾಖೆಯಿಂದ ತಂದು ಹಾಜರುಪಡಿಸಲು ನನ್ನದೇನೂ ಅಭ್ಯಂತರ ಇರುವುದಿಲ್ಲ. ಸದರಿ ನಿಪಿ.21 ಹಾಗೂ 22 ರಲ್ಲಿರುವ ನಾಗರತ್ನಮ್ಮನವರ ಸಹಿಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳಲ್ಲಿರುವ ನಾಗರತ್ನಮ್ಮನವರ ಸಹಿಗಳನ್ನು ನೋಡಿರುತ್ತೇನೆಯೇ ಎಂದರೆ ಸಾಕ್ಷಿಯು ಬೆಳೆಹಾನಿಗೆ ಸಂಬಂಧಿಸಿದಂತೆ ಅರ್ಜಿಯನ್ನು ನೀಡಿದ್ದು, ಬ್ಯಾಂಕಿಂನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಜಮೀನಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ನಾನು ನೋಡಿರುತ್ತೇನೆ.

ಸರ್ವೆ ನಂಬರ್ 96 ರಲ್ಲಿ ನಾಗರತ್ನಮ್ಮನವರಿಗೆ ಮಂಜೂರಾದ 30 ಗುಂಟೆ ಜಮೀನಿನ ಮಂಜುರಾತಿಗೆ ಸಂಬಂಧಿಸಿದಂತೆ ರಾಮಣ್ಣನವರು ತಕರಾರು ಮಾಡಿರುತ್ತಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ.

ನಾಗರತ್ನಮ್ಮನವರು ಭೂಸುಧಾರಣಾ ಮಂಡಳಿಗೆ ಹೋಗಿ ಸಹಿ ಮಾಡಿದ ಪಕ್ಷದಲ್ಲಿ ಸದರಿಯವರ ಸಹಿ ಭೂ ನ್ಯಾಯ ಮಂಡಳಿಯ ದಾಖಲೆಗಳಲ್ಲಿ ಇರುತ್ತದೆ ಎಂದರೆ ಇರಬಹುದು. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ತರಿಸಲು ನನ್ನದೇನೂ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ನಾಗರತ್ನಮ್ಮನವರಿಗೆ ಮಂಜುರಾದ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಯಾಗಿ ಮಂಜೂರು ಮಾಡಿಸಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ.

ನನ್ನ ಅಣ್ಣ ರತ್ನಾಕರ ಅಕ್ರಮ ಸಕ್ರಮ ಸಮಿತಿಯಲ್ಲಿ ಸದಸ್ಯರಾಗಿದ್ದರು ಎಂದರೆ ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗರತ್ನಮ್ಮನವರಿಗೆ ಜಮೀನು ಮಂಜೂರಾಗುವ ಸಮಯದಲ್ಲಿ ಅಳತೆ ಸ್ಕೆಚ್ ಅನ್ನು ಪಡೆದುಕೊಂಡಿದ್ದು ಅದರಲ್ಲಿ ನಾಗರತ್ನಮ್ಮ ಬಿನ್ ದುಗ್ಗಪ್ಪ ಗೌಡ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲೆ ಪರಿಶೀಲಿಸಿ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಸದರಿ ಮೂಲ ದಾಖಲಾತಿಯನ್ನು ತಾಲೂಕು ಕಚೇರಿಯಿಂದ ತರಿಸಲು ನನ್ನ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ರಾಮಣ್ಣನವರ ಅನುಭವದಲ್ಲಿರುವ ಜಮೀನು ಮಂಜೂರು ಮಾಡಬಾರದೆಂದು ತಕರಾರು ನೀಡಿದ್ದರೂ ನನ್ನ ಅಣ್ಣ ರತ್ನಾಕರ ರವರ ರಾಜಕೀಯ ಪ್ರಬಾವ ಬಳಸಿ ರಾಮಣ್ಣನವರ ಅನುಭವದಲ್ಲಿರುವ ಜಮೀನನ್ನು ಮಂಜೂರು ಮಾಡಿಸಿಕೊಂಡಿರುತ್ತೇವೆ ಎಂದರೆ ಆ

ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನಾಗರತ್ನಮ್ಮನವರು ವಿಲ್ ಅನ್ನು ಬರೆಯುವ ಸಮಯದಲ್ಲಿ ಅನಾರೋಗ್ಯದಿಂದ ಇದ್ದರು, ವಿಲ್ ಅನ್ನು ಬರೆಯುವ ಲೋಕಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ಮನವರು ನನ್ನ ಹೆಸರಿಗಾಗಲೀ ನನ್ನ ಅಣ್ಣ ರತ್ನಾಕರ ಅವರ ಹೆಸರಿಗಾಗಲಿ , ಲಕ್ಷ್ಮಣ ಅವರ ಹೆಸರಿಗೆ ಯಾವುದೆ ವಿಲ್ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ನವರು ಜಮೀನಿನ ಮೇಲೆ ವಾದಿಯಾದ ರಾಮಣ್ಣನವರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ನಾಗರತ್ನಮ್ಮನವರು ವಿಲ್ ಮಾಡಿದ್ದರು ಎಂಬ ವಿಚಾರ ಸುಳ್ಳಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಾಗರತ್ನಮ್ಮನವರ ವಿಲ್ ಅನ್ನು ತಹಸಿಲ್ದಾರ್ ಅವರ ಕಚೇರಿಗೆ ಯಾರು ಹಾಜರುಪಡಿಸಿರುತ್ತಾರೆ ಎಂದರೆ ನಾಗರತ್ನಮ್ಮನವರೇ ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾಗರತ್ನಮ್ಮನವರು ವಿಲ್ ಮಾಡಿರುತ್ತಾರೆ ಎಂಬುದಾಗಿ ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಾಗರತ್ನಮ್ಮನವರಿಗೆ ವಿಲ್ ಮಾಡುವ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

ಸಹಿ/-
(ನಂದಿನಿ ಎಮ್. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ